408 13.08.2025


**ಅರ್ಚನ. ಎಂ. ಎಸ್**
ಸರ್ಕಾರದ ಜಂಟಿ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

**ARCHANA. M. S**
Joint Secretary to Government
Animal Husbandry and Fisheries Department


ಅ.ಸ.ಪತ್ರ ಸಂಖ್ಯೆ:ಪಸಂಮೀ 162 ಸಲೆವಿ 2025 ದಿನಾಂಕ:07.08.2025

ಮಾನ್ಯರೇ,

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:408 **ಪಶುಪಾಲಕ ಸಮಾಜದವರಿಗೆ ಮೇವಿನ ಕೊರತೆಯ ಕುರಿತಾಗಿದ್ದು**, ಉಪ ಪ್ರಶ್ನೆ (ಅ) ರಲ್ಲಿನ ವಿಷಯವು **ಅರಣ್ಯ ಇಲಾಖೆಗೆ** ಸಂಬಂಧಿಸಿರುತ್ತದೆ. ಆದ್ದರಿಂದ ಸದರಿ ಪ್ರಶ್ನೆಯ ಉಪ ಪ್ರಶ್ನೆ (ಆ) ಮತ್ತು (ಇ) ಗೆ ಸಂಬಂಧಿಸಿದ ಪಶುಸಂಗೋಪನೆ ಇಲಾಖೆಯ ಮಾಹಿತಿಯೊಂದಿಗೆ (ಪ್ರತಿ ಲಗತ್ತಿಸಿದೆ) ಸದರಿ ಪ್ರಶ್ನೆಯನ್ನು **ಅರಣ್ಯ ಇಲಾಖೆಗೆ** ವರ್ಗಾಯಿಸಲಾಗಿದೆ (ಪ್ರತಿ ಲಗತ್ತಿಸಿದೆ) ಹಾಗೂ ಸದರಿ ಪ್ರಶ್ನೆಯ ಉತ್ತರವನ್ನು ನೇರವಾಗಿ ಕಾರ್ಯದರ್ಶಿ, ವಿಧಾನ ಪರಿಷತ್ತು, ಇವರಿಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,
ಅರ್ಚನ. ಎಂ. ಎಸ್

**ಇವರಿಗೆ:**

**ಶ್ರೀಮತಿ ಸುಶೀಲ ಕೆ.**
ಸರ್ಕಾರದ ಉಪ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು.

07/8/25

**ಪ್ರತಿ:**
ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು.

7/8/25

AH

# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ***

ಸಂಖ್ಯೆ:ಕವಿಪ:156ನೇಉ:2025

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ: 5079, ವಿಧಾನಸೌಧ,
ಡಾ: ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560 001, ದಿನಾಂಕ:29.07.2025.

ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/
ಸರ್ಕಾರದ ಕಾರ್ಯದರ್ಶಿಯವರಿಗೆ,
**ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.**

**ಮಾನ್ಯರೇ,**

ಸಭಾಪತಿಯವರು ಅಂಗೀಕರಿಸಿದ ರೀತ್ಯಾ ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆಯನ್ನು ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 408**

ತಮ್ಮ ನಂಬುಗೆಯ,

ಕಾರ್ಯದರ್ಶಿಯವರ ಪರವಾಗಿ
ಕರ್ನಾಟಕ ವಿಧಾನ ಪರಿಷತ್ತು

ಸಮೂಹ: **III**
ಉತ್ತರಿಸಬೇಕಾದ ದಿನಾಂಕ : **13.08.2025**

ವಿಧಾನ ಪರಿಷತ್ತಿನ ಸದಸ್ಯರಾದ **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)** ಅವರ ಪ್ರಶ್ನೆಯನ್ನು ಕಳುಹಿಸಿಕೊಡಲಾಗಿದೆ.

**ವಿಷಯ** : ಪಶುಪಾಲಕ ಸಮೂಜದವರಿಗೆ ಮೇವಿನ ಕೊರತೆಯ ಕುರಿತು.

**ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:

(ಅ) ಅರಣ್ಯ ಅಂಚಿನಲ್ಲಿ ವಾಸಿಸುವ ಬುಡಕಟ್ಟು ಪಶುಪಾಲಕ ಹಿಂದುಳಿದ ವರ್ಗದ ಸಮೂಜದವರಿಗೆ ಕಾಡಿನಲ್ಲಿ ದನಕರು ಮತ್ತು ಕುರಿಗಳನ್ನು ಮೇಯಿಸಲು ಅವಕಾಶ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಜಾನುವಾರುಗಳಿಗೆ ಮೇವು ಪೂರೈಸಲು ಸರ್ಕಾರದಲ್ಲಿ ಇರುವ ಯೋಜನೆಗಳು, ಮಾನದಂಡಗಳು ಮತ್ತು ಜಿಲ್ಲಾವರು ಜಾನುವಾರುಗಳ ಮೇವು ಖರೀದಿಸಲು ಒದಗಿಸಿದ ಅನುದಾನವೆಷ್ಟು; (ವಿವರ ನೀಡುವುದು)

(ಇ) ಅರಣ್ಯ ಇಲಾಖೆಯವರು ಕಾಡಿನಲ್ಲಿ ಜಾನುವಾರುಗಳನ್ನು ಮೇಯಿಸಲು ಅವಕಾಶ ನೀಡದಿದ್ದರೆ ಸರ್ಕಾರವು ರಾಜ್ಯದ ಎಲ್ಲಾ ಪಶುಪಾಲಕರಿಗೆ ಮೇವು ಒದಗಿಸಲು ಸಾಧ್ಯವೇ; ಸರ್ಕಾರದ ಮುಂದಿನ ಕ್ರಮಗಳ ಕುರಿತು ಮಾಹಿತಿಯನ್ನು ಒದಗಿಸುವುದು?